सत्यमेव जयते

ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಜನವರಿ 7, 2019

ಮಾನ್ಯ ಕುಮಾರಸ್ವಾಮಿ ಅವರೇ,

**ವಿಷಯ: ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ (ದಲಿತರು) ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ಮಿತಿಮೀರಿದ ಶೋಷಣೆ ಮತ್ತು ದೌರ್ಜನ್ಯವನ್ನು ಅಂತ್ಯಗೊಳಿಸಿ.**

ಹಾಸನ ಜಿಲ್ಲೆಯಲ್ಲಿ ಡಿಸೆಂಬರ್ 16, 2018 ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ 16 ಮಹಿಳೆಯರು ಮತ್ತು 4 ಮಕ್ಕಳನ್ನು ಒಳಗೊಂಡಂತೆ 52 ಜನರನ್ನು ಪೋಲಿಸರು ರಕ್ಷಿಸುವವರೆಗೂ ಮೂರು ವರ್ಷಗಳ ಗುಲಾಮಗಿರಿಗೆ ಬಳಸಿಕೊಂಡ ಅತ್ಯಂತ ಅಮಾನವೀಯ ಕೃತ್ಯದ ಬಗ್ಗೆ ನಾನು ನಿಮಗೆ ಪತ್ರ ಬರೆಯುತ್ತಿದ್ದೇನೆ.

1976 ರ ಜೀತ ಪದ್ಧತಿ ವ್ಯವಸ್ಥೆ (ನಿರ್ಬಂಧ) ಕಾಯಿದೆ ಮತ್ತು 1989ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ ಕಾಯ್ದೆ)ಯಂತಹ ಬಲಿಷ್ಠ ಕಾನೂನಿನ ಹೊರತಾಗಿಯೂ ಈ ಬಡ ಸಂತ್ರಸ್ಥರನ್ನು ದಿನಕ್ಕೆ 19 ಗಂಟೆಗಳ ಕಾಲ ವೇತನ ಇಲ್ಲದೆ ಕೆಲಸ ಮಾಡಲು ಒತ್ತಾಯ ಹೇರಿದ್ದು, ಯಾವುದೇ ಪ್ರತಿಭಟನೆ ಅಥವಾ ಅಸಹಕಾರ ತೋರಿದ್ದಲ್ಲಿ ಅವರ ಮೇಲೆ ಕ್ರೂರವಾಗಿ ಚಾವಟಿ ಏಟು ನೀಡಿದ್ದು ಮತ್ತು ಮಹಿಳೆಯರ ಮೇಲೆ ಲೈಂಗಿಕ ನಿಂದನೆ ಮಾಡಿದ್ದು ನಾಗರೀಕ ಸಮಾಜಕ್ಕೆ ಅತ್ಯಂತ ನಾಚಿಕೆಗೇಡಿನ ಸಂಗತಿ. ಈ ದೊಡ್ಡ ಪ್ರಮಾಣದ ಅಪರಾಧವು ಪೊಲೀಸರು ಮತ್ತು ಸರ್ಕಾರಿ ಇಲಾಖೆಗಳ ಗಮನಕ್ಕೆ ಮೂರು ವರ್ಷಗಳ ಕಾಲ ಬಂದಿಲ್ಲ ಎನ್ನುವುದು ಆಘಾತಕಾರಿ ಮತ್ತು ಗೊಂದಲದ ವಿಷಯವಾಗಿದೆ.

ಈ ಸಂತ್ರಸ್ಥರನ್ನು ಜೀತದಾರರನ್ನಾಗಿ ಮಾಡಲು ಅನುಸರಿಸದಂತಹ ಅಮಾನುಷ ರೀತಿ ಮತ್ತು ನಯ ವಂಚನೆ ನಮ್ಮನ್ನು ಇನ್ನಷ್ಟು ಭಯಭೀತಿಗೊಳಿಸುತ್ತಿದೆ. ಸಾಲ ಮರುಪಾವತಿ ಮಾಡಲಾಗದ ಕಾರ್ಮಿಕರನ್ನು ಜೀತದಾಳುಗಳನ್ನಾಗಿ ಮಾಡಿಕೊಳ್ಳುವುದು ಸಾಮಾನ್ಯವಾದರೆ, ಈ ಪ್ರಕರಣದಲ್ಲಿ ಸಂತ್ರಸ್ಥರನ್ನು ಬಸ್ ನಿಲ್ದಾಣ ಮತ್ತು ರೈಲ್ವೇ ನಿಲ್ದಾಣಗಳಲ್ಲಿ ನೌಕರಿ ಕೊಡಿಸುವುದಾಗಿ ಸುಳ್ಳು ಭರವಸೆ ನೀಡಿ ವಂಚಿಸಲಾಗಿದೆ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ.

ಸಂತ್ರಸ್ಥರನ್ನು ರಕ್ಷಿಸಿದ ಮತ್ತು ತನಿಖೆಗಳು ಪ್ರಾರಂಭವಾದ ಈ ಸಂದರ್ಭದಲ್ಲಿ ಸರ್ಕಾರವು ಇದನ್ನು ಇನ್ನೊಂದು ಕಾನೂನು ಉಲ್ಲಂಘನೆಯ ಘಟನೆ ಎಂದು ಕೇವಲವಾಗಿ ಪರಿಗಣಿಸದೆ ರಾಜ್ಯದ ಉದ್ದಗಲಕ್ಕೂ ಪಿಡುಗಾಗಿ ಬೆಳೆದಿರುವ ಸಮಾಜಘಾತುಕ ಪದ್ಧತಿ ಎಂದು ಪರಿಗಣಿಸಬೇಕು. ದೌರ್ಜನ್ಯದಿಂದ ಜನರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದು ಮತ್ತು ಶೋಷಣೆ ಮಾಡುವುದು ಕರ್ನಾಟಕದಲ್ಲಿ ಅತಿರೇಕವಾಗಿದೆ ಮತ್ತು ಈ ರೀತಿಯ ಶೋಷಣೆ ಮರುಕಳಿಸದಂತಿರಲು ಕ್ರಮ ತೆಗೆದುಕೊಳ್ಳಬೇಕಾಗುವ ತುರ್ತನ್ನು ಸರ್ಕಾರ ಅರಿಯಬೇಕು.

**ಶೀಘ್ರ ತನಿಖೆ ಮಾಡಿ ಮತ್ತು ಕರ್ನಾಟಕದಲ್ಲಿ ಎಸ್ಸಿ / ಎಸ್ಟಿ ಜನರ ಶೋಷಣೆಯನ್ನು ಕೊನೆಗೊಳಿಸಿ**

ಒಂದು ಸರ್ಕಾರೇತರ ಸಂಸ್ಥೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ನಡೆಸಿದ ಅಧ್ಯಯನದ ಪ್ರಕಾರ ಅಂದಾಜಿಸಿರುವಂತೆ **ಬೆಂಗಳೂರಿನಾದ್ಯಂತ 33.4% ನಷ್ಟು ಅಂದರೆ 16,70,734 ಕಾರ್ಮಿಕರಲ್ಲಿ 5,58,334 ನಷ್ಟು ಮಂದಿ ಗುಲಾಮಗಿರಿ ಮತ್ತು ಜೀತದಾಳುಗಳಾಗಿ ಬದುಕುತ್ತಿದ್ದಾರೆ.** (ವರದಿ ಲಗತ್ತಿಸಲಾಗಿದೆ)

11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680
ಅಂತರ್ಜಾಲ ವಿಳಾಸ : rajeev.c@nic.in
www.rajeev.in / ham:VU2RCL

**ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳು:** ಈ ಮೂರು ಜಿಲ್ಲೆಗಳಲ್ಲಿ 92% ಕಾರ್ಮಿಕರು ಎಸ್ಸಿ / ಎಸ್ಟಿ ಸಮುದಾಯಗಳಿಗೆ ಸೇರಿರುವುದರಿಂದ ಬಹುತೇಕ ಜೀತ ಕಾರ್ಮಿಕರು ಎಸ್ಸಿ / ಎಸ್ಟಿ ಸಮುದಾಯದವರು ಎಂದು ಸಾಬೀತುಪಡಿಸುತ್ತದೆ.

ಈ ಎಲ್ಲಾ ಸತ್ಯಾಂಶಗಳು ಮತ್ತು ಉದಾಹರಣೆಗಳು ರಾಜ್ಯದಲ್ಲಿ ಎಸ್ಸಿ / ಎಸ್ಟಿಗಳ ಮೇಲಿನ ದೌರ್ಜನ್ಯ ಮತ್ತು ಶೋಷಣೆಗಳನ್ನು ತಡೆಗಟ್ಟುವಲ್ಲಿ ಕರ್ನಾಟಕದ ಸರ್ಕಾರವು ಬಹುಮಟ್ಟಿಗೆ ವಿಫಲವಾಗಿದೆ ಎಂದು ಸಾಬೀತು ಪಡಿಸುತ್ತವೆ. ಕಾನೂನಿನ ಅಸಮರ್ಪಕ ಅನುಷ್ಠಾನವು ಸಹ ನಮ್ಮ ರಾಜ್ಯದ ಕೆಲವು ಬಡ ಮತ್ತು ಶೋಷಿತ ಸಮುದಾಯಗಳ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಕರ್ನಾಟಕ ಸರ್ಕಾರ ವಿಫಲವಾಗಿದೆ ಎಂದು ಸಾಬೀತುಪಡಿಸಿದೆ.

ಸರ್ಕಾರವು ಈಗಲಾದರೂ ಎಚ್ಚೆತ್ತು ರಾಜ್ಯದ ಉದ್ದಗಲಕ್ಕೂ ತನಿಖೆಯನ್ನು ಪ್ರಾರಂಭಿಸಬೇಕು ಮತ್ತು ಜೀತಪದ್ಧತಿಯಿಂದ ಬಿಡುಗಡೆಗೊಳಿಸಿ ಸಂತ್ರಸ್ಥರಿಗೆ ಪುನರ್ವಸತಿ ನೀಡಬೇಕು ಹಾಗೂ ಎಲ್ಲಕ್ಕಿಂತ ಹೆಚ್ಚು ಮುಖ್ಯವಾಗಿ ಅಮಾನವೀಯ ಕೃತ್ಯಗಳ ಮೂಲಕ ಬಡವರನ್ನು ಶೋಷಿತರನ್ನಾಗಿ ಮಾಡುವವರ ಮೇಲೆ ನಿರ್ದಾಕ್ಷಿಣ್ಯ ಕಾನೂನು ಕ್ರಮ ಕೈಗೊಳ್ಳಬೇಕು.

ಬಡವರ ಮತ್ತು ಶೋಷಿತ ವರ್ಗಗಳ ಸಂವಿಧಾನದತ್ತ ಮೂಲಭೂತ ಹಕ್ಕುಗಳನ್ನು ಕಾಪಾಡುವುದು ಮತ್ತು ಭವಿಷ್ಯದಲ್ಲಿ ಶೋಷಣೆಯನ್ನು ತಡೆಗಟ್ಟುವುದನ್ನು ಸರ್ಕಾರವು ತನ್ನ ಪ್ರಮುಖ ಆದ್ಯತೆ ಮಾಡಿಕೊಳ್ಳಬೇಕು. ಈ ಸಮಸ್ಯೆಯನ್ನು ಸಂಪೂರ್ಣವಾಗಿ ತೊಡೆದುಹಾಕಲು ಈ ಕೂಡಲೇ ಕಾರ್ಯಪ್ರವೃತ್ತವಾಗಬೇಕೆಂದು ನಾನು ನಿಮ್ಮನ್ನು ಒತ್ತಾಯಿಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರ ಒಂದು ಕಾರ್ಯಪಡೆಯನ್ನು ರಚಿಸಬೇಕು ಮತ್ತು ಜೀತದಾಳುಗಳನ್ನು ಶೋಷಣೆಗೊಳಿಪಡಿಸುತ್ತಿರುವ ತೋಟಗಳು, ಕಾರ್ಖಾನೆಗಳು ಮತ್ತು ಇತರೆ ಸ್ಥಳಗಳಲ್ಲಿ ದಾಳಿ ನಡೆಸಿ ತನಿಖೆಗೆ ಒಳಪಡಿಸಬೇಕು.

ನಿಮ್ಮ ಸಕಾರಾತ್ಮಕ ಪ್ರತಿಕ್ರಿಯೆ ಮತ್ತು ಸೂಕ್ತ ಕ್ರಮವನ್ನು ನಿರೀಕ್ಷಿಸುತ್ತೇನೆ.

**ರಾಜೀವ್ ಚಂದ್ರಶೇಖರ್**

**ದಾಖಲೆಗಳು:** ಮೇಲೆ ಹೇಳಿರುವಂತೆ ಪ್ರತಿಯನ್ನು ಲಗತ್ತಿಸಲಾಗಿದೆ

**ಶ್ರೀ ಹೆಚ್.ಡಿ.ಕುಮಾರಸ್ವಾಮಿ**
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು

**ಪ್ರತಿಯನ್ನು:**

**ಡಾ. ಜಿ.ಪರಮೇಶ್ವರ,** ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಸಚಿವರು, ವಿಧಾನಸೌಧ, ಬೆಂಗಳೂರು.